# ಗುಡ್ಡ–ಗುರು

'ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ?' ಎನ್ನುವುದು 'ರಾಮಚಂದ್ರ ಚರಿತ ಪುರಾಣ'ದ ಕವಿ ನಾಗಚಂದ್ರನ ಮಾತು. ಈ ಮಾತು ಇದೀಗ ಗುಡ್ಡಗಳಿಗೆ ಅನ್ವಯಿಸಬಹುದೆ? ಗುಡ್ಡಗಳೂ ಮರ್ಯಾದೆ ಮೀರುತ್ತಿವೆ. ಕುಸಿಯತೊಡಗಿವೆ. ಯಾವುದನ್ನು ಸ್ಥಾವರವೆಂದು ನಂಬಿದ್ದೆವೋ, ಆ ಗುಡ್ಡಗಳು ಜರಿದು, ಮಳೆನೀರಿನೊಂದಿಗೆ ಚಲನಶೀಲತೆ ಪಡೆದುಕೊಂಡಿವೆ – ಸ್ಥಾವರಕ್ಕೂ ಅಳಿವುಂಟು ಎನ್ನುವಂತೆ.

ಗುಡ್ಡ ಎಂದರೆ ಮಣ್ಣುಕಲ್ಲುಗಳು ಮಿಳಿತವಾದ ಉಬ್ಬು ರಚನೆಯಷ್ಟೇ ಅಲ್ಲ; ವಿದ್ಯಾರ್ಥಿ ಎನ್ನುವ ಅರ್ಥವೂ ಗುಡ್ಡ ಶಬ್ದಕ್ಕಿದೆ. 'ವಿಪುಲ ರೂಪಧಾರಿಣಿ'ಯಾದ ಅಖಂಡ ಪ್ರಕೃತಿಯ ಸಮ್ಮುಖದಲ್ಲಿ ಗುಡ್ಡದ್ದು ಶಿಷ್ಯನ ಪಾತ್ರದ ನಿರ್ವಹಣೆ. ಆದರೆ, ಗುಡ್ಡದೆದುರು ಮನುಷ್ಯಮಾತ್ರರು ಶಿಷ್ಯಂದಿರೇ. ಪ್ರಕೃತಿಯ ಕಂದಮ್ಮಗಳು ತಾವೆಂದು ನಂಬುವವರಿಗೆ ಎಲ್ಲ ಗುಡ್ಡಗಳೂ ಗುರುಗಳೇ. ತುಂಬಿದ ಕೊಡದಂಥ ಸಹೃದಯರೆಲ್ಲ ಗುಡ್ಡಗಳೇ.

ಗುಡ್ಡದೆದುರು ಮನುಷ್ಯ ತೃಣಮಾತ್ರ. ವಿನಯವಂತಿಕೆಯನ್ನು ಗುಣವೆಂದು ನಂಬುವ ಸಹೃದಯರಿಗೆ 'ಹುಲ್ಲಾಗು ಬೆಟ್ಟದಡಿ' ಎನ್ನುವ ಅರಿವು ಅಗತ್ಯ. ಗುಡ್ಡವೇರಿ ನಿಂತಾಗ ಕೆಲವರು ಬಾನು ಕೈಗೆಟುಕಲು ಮೂರೇ ಗೇಣು ಬಾಕಿಯೆಂದು ಬೀಗುವುದೂ ಇದೆ. ಅಂಥವರು, ತಮ್ಮ ಕಾಲಡಿಯ ಹುಲ್ಲು ಕಾಣಬೇಕು. ಬೆಟ್ಟದಡಿಯ ಹುಲ್ಲು, ಶಿಖರದಲ್ಲೂ ಎದೆ ಸೆಟೆಸಿ ನಿಂತಿರುತ್ತದೆ. ಗುಡ್ಡದ ಮಯ್ಯಿ ಸವಕಳಿಯಾಗದಂತೆ ಹುಲ್ಲಿನೆಸಳುಗಳು ಮಮತೆಯ ಹೊದಿಕೆಯಾಗಿ ಕಾಯುತ್ತವೆ; ಕೊನೆಗೊಮ್ಮೆ ಕರಕಲಾಗಿ, ಮಣ್ಣಿನ ಫಲವತ್ತತೆ ಹೆಚ್ಚಿಸುತ್ತವೆ. ಹುಲ್ಲಿನ ಬದುಕು ಸಾರ್ಥಕ ಜೀವನಚಕ್ರಕ್ಕೊಂದು ಮಾದರಿ. ಹುಲ್ಲಿನಿಂದಲೂ ನಾವು ಕಲಿಯುವುದಿದೆ. ಹುಡಿಯಾಗುವವರೆಗೂ ಎದೆ ಸೆಟೆಸಿಯೇ ಇರುವುದು ಹುಲ್ಲಿಗೆ ಸಹಜಗುಣ; ಎದೆ ಸೆಟೆಸಿ ನಿಲ್ಲುವ ನಮ್ಮದು ಪೌರುಷ ಪ್ರದರ್ಶನ, ಅಹಂ ತಣಿಸುವ ಪ್ರಯತ್ನ. ಹುಲ್ಲಿನ ಬದುಕು ಜಂಗಮವಾಗಿರಬಹುದು; ಗುಡ್ಡದ ಸ್ಥಾವರ ಸ್ವರೂಪಕ್ಕೆ ಹುಲ್ಲೆಸಳೂ ಬೇರು.

ಬದುಕನ್ನು ಪ್ರಕೃತಿಯ ಕರುಣೆಯ ರೂಪದಲ್ಲಿ ಭಾವಿಸುವವರಿಗೆ ಹುಲ್ಲಿನೆಸಳೂ ಒಂದು ಪಥ್ಯ, ಗುಡ್ಡ ಮಹಾಗುರು. ಗುಡ್ಡ ಬದುಕಿಗೊಂದು ಗುರಿಯನ್ನು ಕಾಣಿಸುತ್ತದೆ. ಮೊಲೆಯುಣಿಸು ಕರುಣಿಸಿ ಹರಸುತ್ತದೆ. ಹಸುರಿನ ಉಸಿರಿನ ಅಕ್ಷಯಪಾತ್ರೆಯಾಗಿ ಪರಿಣಮಿಸುತ್ತದೆ. ಪ್ರಕೃತಿಯ ಅಮೃತಫಲಗಳನ್ನುಂಡು ಪ್ರತಿಯಾಗಿ ನಾವೆಸಗುವುದೇನು? ವಿವೇಕಶೂನ್ಯರಾಗಿ ಅಹಂಕಾರವನ್ನೇ ಗುಡ್ಡವನ್ನಾಗಿಸಿಕೊಂಡಾಗ, ತಾಯ ಎದೆಯನ್ನೇ ಕಿತ್ತು ತಿನ್ನುವ ಹಪಹಪಿ. ಒಡಲನ್ನು ಕೊರೆದರೆ, ಯಾವ ಮಹಾತಾಯಿ ತಾನೆ ಕುಸಿಯದೆ ಸ್ಥಿರವಾಗಿ ನಿಲ್ಲುವಳು?

ಬೆಟ್ಟದಡಿ ಹುಲ್ಲಾಗುವ ಬದಲು, ಗಿರಿಶಿಖರದ ನೆತ್ತಿಯ ಮೇಲೆ ಅಹಮ್ಮಿನ ಗೆಲ್ಲುಗಳನ್ನು ನೆಡುವುದು ಈ ಹೊತ್ತಿನ ಮನುಷ್ಯ ಸ್ವಭಾವ ಎನ್ನುವಂತಾಗಿದೆ. ನಿಕ್ಷೇಪಗಳ ಹೆಕ್ಕಲು ಗುಡ್ಡದ ಒಡಲು ಬಗೆಯುತ್ತೇವೆ. ನಮ್ಮ ಅಹಮ್ಮು, ಕ್ರೌರ್ಯವನ್ನೇ ರಕ್ಕಸ ಯಂತ್ರಗಳಿಗೆ ಹಲ್ಲುಗಳಾಗಿಸುತ್ತೇವೆ. ಗುಡ್ಡಗಳನ್ನೇ ಪುಡಿಗಟ್ಟಿ ಊರು ರೂಪಿಸುತ್ತೇವೆ; ಊರಿನ ಮನೆಗಳಿಗೆ ಕಲ್ಲು ಒದಗಿಸುತ್ತೇವೆ. ಹಸುರು ಗುಡ್ಡಗಳ ಮೇಲೆ ಕಾಂಕ್ರೀಟು ಮಹಲುಗಳನ್ನು ನಿಲ್ಲಿಸಿ 'ನೋಡು ಬಾ' ಎಂದು ಪ್ರವಾಸಿಗರ ಕರೆಯುತ್ತೇವೆ. ನಮ್ಮ ಪ್ರತಿ ಚಟುವಟಿಕೆಯೂ ಗುಡ್ಡವನ್ನು ಗಾಯಗೊಳಿಸುವಂತಹದ್ದೇ. ಆ ಗಾಯ ಕೆಲವೊಮ್ಮೆ ಪಾತಾಳದ ಬಾಯಾಗಿ ಗುಡ್ಡದ ಜೀವವನ್ನೇ ನುಂಗಿ ನೊಣೆದುಬಿಡುತ್ತದೆ.

ಮನುಷ್ಯನ ಬದುಕಿನಲ್ಲಿ ಕುಸಿಯುವಿಕೆ ಸಹಜ. ಕುಸಿದ ಮನುಷ್ಯ ಎದ್ದುನಿಲ್ಲುತ್ತಾನೆ. ಶಿಖರ ಸಾಧನೆಯ ಸಾಧಕರೆಲ್ಲರೂ ಹಲವು ಬಾರಿ ಕುಸಿದವರೇ, ಧೃತಿಗೆಡದೆ ನಿಂತವರೇ ಆಗಿರುತ್ತಾರೆ. ಆದರೆ, ಗುಡ್ಡ ಕುಸಿಯುವುದು ಸಹಜವಲ್ಲ. ಕುಸಿದ ಗುಡ್ಡ ಮತ್ತೆ ಪುಟಿದೆದ್ದು ನಿಲ್ಲುವುದಿಲ್ಲ. ಗುಡ್ಡ ಕುಸಿಯುವುದೆಂದರೇನು? ಬದುಕು ಕುಸಿಯುವುದೆಂದರ್ಥ. ನಂಬಿಕೆ–ಭರವಸೆ ಹುಸಿಯಾಗುವುದು, ಆತ್ಮವಿಶ್ವಾಸ ಮುಕ್ಕಾಗುವುದು ಎಂದರ್ಥ. ಗುಡ್ಡ ಕುಸಿತದ ಹೆಸರಲ್ಲಿ ಅರಿವು ಇರುವು ಕಳೆದುಕೊಳ್ಳುವುದು.

ಸಮುದ್ರ ತನ್ನ ಮೇರೆ ಮೀರುವುದು ಕಾಲದ ಲೀಲೆಯಾಗಿ ಕವಿಗೆ ಕಂಡಿದೆ. ವರ್ತಮಾನದ ದುರಂತಗಳಿಗೂ ಕಾಲವನ್ನು ಹೊಣೆಯಾಗಿಸುವುದು ಸುಲಭ. ಆದರೆ, ಕಡಲಾಗಲೀ ಗುಡ್ಡವಾಗಲೀ ಮೇರೆ ಮೀರುವ ಘೋರ ಘಟನೆಗಳನ್ನು ಪ್ರಕೃತಿಯ ಸಹಜ ಪ್ರಕ್ರಿಯೆಯೆಂದೋ ಕಾಲನ ಲೀಲೆಯೆಂದೋ ಹೇಳಲಾಗದು. ಈ ಹೊತ್ತಿನ ಅವಘಡಗಳನ್ನು, ಪ್ರಕೃತಿಯ ಲೀಲೆಯನ್ನು ವಿಕಾಸದ ಬದಲು ವಿಲಾಸಕ್ಕೆ ಬಳಸಿಕೊಳ್ಳಲು ಹೊರಟ ಭಸ್ಮಾಸುರ ಸೃಷ್ಟಿಯ ಫಲಗಳೆಂದು ನೋಡಬೇಕಾಗಿದೆ. ಮನುಷ್ಯನ ಹಸ್ತಕ್ಷೇಪದ ಅತಿ, ಪ್ರಕೃತಿ ಮರ್ಯಾದೆಯ ಮೀರುವುದಕ್ಕೆ ಮೀಟುಗೋಲು.

ಕೈಕಾಲುಗಳ ಕಸುವು ಸೋತು ಜರಿದಂತೆ ಮಣ್ಣುಕಲ್ಲುಗಳ ದಿಬ್ಬವೊಂದು ಕುಸಿದುಬೀಳುತ್ತದೆ. ಪ್ರಕೃತಿಮಾತೆಯ ದಿಟ್ಟ ಮಗುವೊಂದು ನೆಲಕ್ಕೊರಗಿದಂತೆ ಗುಡ್ಡವೊಂದು ಕೊನೆಯುಸಿರೆಳೆಯುತ್ತದೆ. ಪ್ರತಿ ಕುಸಿತದೊಂದಿಗೆ ಅಗಣಿತ ನಿಟ್ಟುಸಿರುಗಳೂ ಸೇರಿಕೊಳ್ಳುತ್ತವೆ. ಜರಿದ ಮಣ್ಣುಕಲ್ಲುಗಳು ಸಮಾಧಿಯ ಸ್ವರೂಪವನ್ನೂ ಪಡೆಯಬಲ್ಲವು. ಗುಡ್ಡದೊಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ನಂಟು ಹೊಂದಿದ್ದ ಜೀವಗಳು ಗುಡ್ಡದೊಂದಿಗೆ ಮಣ್ಣಾಗುತ್ತವೆ. ಆ ಮಣ್ಣಿನಡಿಯ ಆರ್ತನಾದಗಳಿಗೆ ಕಿವಿಗೊಡುವಷ್ಟು ಸಾವಧಾನ ಹಾಗೂ ಸಂವೇದನೆಯನ್ನು ತೋರದೆ ಹೋದರೆ ನಮ್ಮನ್ನು ಮನುಷ್ಯರೆಂದು ಕರೆದುಕೊಳ್ಳಬಹುದೆ?

ಗುರುವಷ್ಟೇ ಅಲ್ಲ, ಗುಡ್ಡವೊಂದು ಮಗುವೂ ಹೌದು. ಗುರುವೆನ್ನುವುದು ನಮ್ಮರಿವಿಗೆ ಗೋಚರಿಸಬೇಕಾದ ಹೊಳಹು. ಗುಡ್ಡದಲ್ಲಿ ಮಗುವನ್ನು ಕಾಣಲಿಕ್ಕೆ ಬೇಕಾದುದು ವಿವೇಚನಾಶಕ್ತಿಯಲ್ಲ, ಮನಸ್ಸಿನ ಆರ್ದ್ರತೆ. ಆಡಿ ಆಡಿ ದಣಿದ ಮಗುವೊಂದು ಮೈಮರೆತು ನಿದ್ರಿಸಿದಂತೆ ಗುಡ್ಡ ಕಾಣುತ್ತದೆ. ಮಗುವಿನ ಮೋರೆಯಲ್ಲಿನ ನಗೆಮಿನುಗಿನಂತೆ ಗುಡ್ಡದ ಮೈಯ ಹಸಿರುಮುಗುಳು. ಮಗುವಿನ ಮೊಗದ ಸಂತೃಪ್ತ ಭಾವವೇ ಗುಡ್ಡದ ಕರುಣೆ, ಒಲುಮೆ. ಆ ಮಗುವಿನ ನಿದ್ದೆಗೆ ಅಡ್ಡಿಪಡಿಸುವ ಹೆಡ್ಡತನ ನಮ್ಮದಾಗಬಾರದು. ಮಗು ಅತ್ತರೆ ಸಂಭಾಳಿಸಬಹುದು. ಗುಡ್ಡ ರೋದಿಸಿದರೆ ನಮ್ಮನ್ನು ಕಾಯುವರಾರು?

ಭೂಮಿತಾಯಿಯ ಮೊಲೆಗಳಂಥ ಗುಡ್ಡಗಳು ಜರಿದು ಬಯಲಾಗುತ್ತಿರುವಂತೆಯೇ ತರಿದೂ ಬರಿದಾಗಿಸುತ್ತಿರುವ ವಿರೋಧಾಭಾಸ ಇಂದಿನದು. ಅಮ್ಮನಂಥ ಗುರುಗಳೂ ಬಯಲಾಗುತ್ತಿದ್ದಾರೆ. ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು; ಗುರುವಿಲ್ಲದ ದಾರಿಯಲ್ಲಿ ಸಾಗಬಹುದೆ?

■ **ಚಂಪಕಮಾಲಾ**

## ಮಾತೇ ಮುತ್ತು

- ತಾಯಿ ಇಲ್ಲದ ತವರಿಗೆ ಮಗಳು ಬಂದರೆ ಉರಿಬೇಸಗೆಯಲ್ಲಿ ಮರಳುಗಾಡಿಗೆ ಬಂದಂತೆ.
  —ಅನಕೃ
- ಕಾಲವನ್ನು ನಾವು ಪಾಲಿಸಿದರೆ ಅದು ನಮಗೆ ವಿಧೇಯವಾಗಿರುತ್ತದೆ.
  —ಸರ್ ಎಂ. ವಿಶ್ವೇಶ್ವರಯ್ಯ
- ಜೀವನ ಒಂದು ನಾಟಕವಿದ್ದಂತೆ. ಆದರಿಲ್ಲಿ ವಿಶ್ರಮಿಸಲು ಸೈಡ್ ವಿಂಗ್‌ಗಳಿಲ್ಲ.
  —ಟಿ.ಪಿ. ಕೈಲಾಸಂ
- ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೇ ಹೊರತು ಒಡೆಯಬಾರದು.
  —ಮಾಸ್ತಿ
- ಲೋಕವೆಲ್ಲಾ ಬಗ್ಗುವುದು ಶ್ರೇಷ್ಠವಾದ ಬುದ್ಧಿಗೆ ತಾನೇ?
  —ಬಿ.ಎಂ. ಶ್ರೀಕಂಠಯ್ಯ
- ಎಂತಹ ಕಟು ಅನುಭವ ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿ ಆಗಿರೋ ರಹಸ್ಯ.
  —ದ.ರಾ. ಬೇಂದ್ರೆ
- ಲೋಕೋದ್ಧಾರಕ್ಕಾಗಿ ನಾವು ಕೆಲಸ ಮಾಡುತ್ತಿದ್ದೇವೆಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ಪ್ರಯತ್ನ, ನಮ್ಮ ಏಳಿಗೆಗಾಗಿ, ನಮ್ಮ ಬಾಳಿನ ಸಫಲತೆಗಾಗಿ, ನಮ್ಮ ಜೀವನ ಸಂಸ್ಕಾರಕ್ಕಾಗಿ.
  —ಡಿ.ವಿ. ಗುಂಡಪ್ಪ